# ೧೦ ಕ್ಲಾಸ್ ಪಾರ್ಟಿಯಲ್ಲಿ ಮೋಜು!

0333CH10



೩ ನೇ ತರಗತಿಯ ಮಕ್ಕಳು ತರಗತಿಯಲ್ಲಿ ಆಚರಣೆಗೆ ತಯಾರಿ ನಡೆಸುತ್ತಿದ್ದಾರೆ. ಚಿತ್ರವನ್ನು ನೋಡಿ.




© NCERT not to be republished

## ನಾವು ಮಾಡೋಣ

ಮೇಲೆ ಕೊಟ್ಟಿರುವ ಚಿತ್ರದ ಆಧಾರದ ಮೇಲೆ ಈ ಕೆಳಗಿನ ಪ್ರಶ್ನೆಗಳಿಗೆ ನೀವು ಹೇಗೆ ಉತ್ತರಿಸುತ್ತೀರಿ ಎಂಬುದನ್ನು ಚರ್ಚಿಸಿ ಮತ್ತು ವಿವರಿಸಿ.

೧. ಚಿತ್ರದಲ್ಲಿ ತೋರಿಸಿರುವ ವಿವಿಧ ಚಟುವಟಿಕೆಗಳು ಯಾವುವು?

೨. ಶೆಲ್ಲಿ ಬಾಗಿಲಿನ ಎತ್ತರವನ್ನು ಹೇಗೆ ಕಂಡುಹಿಡಿಯುತ್ತಾನೆ?

೩. "ಲೀನಾ ಮತ್ತು ಆದಿ ಅವರ ಕೈದೂರವನ್ನು ಬಳಸಿಕೊಂಡು ಒಂದೇ ಮೇಜನ ಉದ್ದವನ್ನು ಅಳೆಯುತ್ತಾರೆ. ಅವರು ಇಬ್ಬರೂ ಒಂದೇ ಅಳತೆಯನ್ನು ಪಡೆಯುತ್ತಾರಾ?



**ಶಿಕ್ಷಕರಿಗೆ ಟಿಪ್ಪಣಿ:** ಉದ್ದದ ಅನೌಪಚಾರಿಕ ಮತ್ತು ಔಪಚಾರಿಕ ಸಾಧನಗಳನ್ನು ಬಳಸಿಕೊಂಡು ಮಾಪನದ ಕೆಲವು ಉದಾಹರಣೆಗಳನ್ನು ಚಿತ್ರವು ತೋರಿಸುತ್ತದೆ. ಕೈಯಿಂದ ಸ್ಪ್ಯಾನ್, ಹೆಜ್ಜೆಗುರುತು ಮತ್ತು ಕಾಗದದ ಮಾಲೆಗಳಂತಹ ಸೂಕ್ತ ಪದಗಳನ್ನು ಅಳೆಯಲು ಮತ್ತು ಬಳಸಲು ಮಕ್ಕಳಿಗೆ ಅವಕಾಶ ನೀಡಿ.

೪. ಉದ್ದವಾದ ಪೋನಿಟೆಲ್ ಇರುವ ಮಗುವನ್ನು ವೃತ್ತಾಕಾರ ಹಾಕಿ.

೫. ತರಗತಿಯಲ್ಲಿ ಕಿಟಕಿಯ ಎತ್ತರದಷ್ಟು ಉದ್ದವಿರುವ ಕಾಗದದ ಮಾಲೆಗಳನ್ನು ü ನಿಂದ ಗುರುತು ಮಾಡಿ.

೬. ತರಗತಿಯ ಎರಡು ಗೋಡೆಗಳ ನಡುವಿನ ಅಂತರವನ್ನು ಕಂಡುಹಿಡಿಯಿರಿ. ನೀವು ಅದನ್ನು ಹೇಗೆ ಕಂಡುಕೊಂಡಿರಿ? ಅದನ್ನು ಅಳೆಯಲು ಬೇರೆ ಮಾರ್ಗಗಳಿರಬಹುದೆ?

೭. ಈ ಚಿತ್ರದಲ್ಲಿ ಉದ್ದವನ್ನು ಅಳೆಯಲು ಮಕ್ಕಳು ಬಳಸುವ ಎಲ್ಲಾ ವಿಧಾನಗಳನ್ನು ಗುರುತಿಸಿ. ಯಾವ ವಿಧಾನವು ಉತ್ತಮ ಎಂದು ನೀವು ಭಾವಿಸುತ್ತೀರಿ ಮತ್ತು ಏಕೆ?

೩ ನೇ ತರಗತಿಯ ಮಕ್ಕಳು ವಿವಿಧ ಬಣ್ಣದ ಕಾಗದಗಳ ಮಾಲೆಗಳಿಂದ ಬೋರ್ಡ್‌ನ್ನು ಅಲಂಕರಿಸುತ್ತಿದ್ದಾರೆ.



## ನಾವು ಮಾಡೋಣ

೧. ಮೇಲಿನ ಚಿತ್ರದಲ್ಲಿ, ಕೆಳಗಿನ ಸೂಚನೆಯಂತೆ ಕಾಗದದ ಮಾಲೆಗಳನ್ನು ಬಣ್ಣ ಮಾಡಿ.

(ಅ) ಚಿಕ್ಕ ಕಾಗದದ ಮಾಲೆಯನ್ನು ಕೆಂಪು ಬಣ್ಣದಿಂದ ಬಣ್ಣ ಮಾಡಿ. ಅತ್ಯಂತ ಚಿಕ್ಕ ಮಾಲೆಯನ್ನು ನೀವು ಹೇಗೆ ಗುರುತಿಸಿದ್ದೀರಿ ಎಂಬುದನ್ನು ಚರ್ಚಿಸಿ.

(ಆ) ಉದ್ದವಾದ ಕಾಗದದ ಮಾಲೆಯನ್ನು ಹಸಿರು ಬಣ್ಣದಿಂದ ಬಣ್ಣ ಮಾಡಿ. ಅತಿ ಉದ್ದದ ಮಾಲೆಯನ್ನು ಅನ್ನು ನೀವು ಹೇಗೆ ಗುರುತಿಸಿದ್ದೀರಿ ಎಂಬುದನ್ನು ಚರ್ಚಿಸಿ.

೨. ಹಸಿರು ಬೋರ್ಡ್‌ನ ಅಂಚನ್ನು ಅಲಂಕರಿಸಲು ಇನ್ನೂ ಎಷ್ಟು ವರ್ಣರಂಜಿತ ಕಾಗದದ ಮಾಲೆಗಳು ಬೇಕಾಗುತ್ತವೆ?

೩. ಸಂಪೂರ್ಣ ಬೋರ್ಡನ್ ಅಂಚನ್ನು ಅಲಂಕರಿಸಲು ಎಷ್ಟು  ಗಳ ಅಗತ್ಯವಿದೆ?

## ನಾವು ಮಾಡೋಣ

೧. ಉಣ್ಣೆ ಅಥವಾ ಹತ್ತಿಯ ದಾರವನ್ನು ಕೆಳಗೆ ನೀಡಲಾದ ರೇಖೆಯಷ್ಟು ಉದ್ದವಾಗಿ ಕತ್ತರಿಸಿ ಅಂಟಿಸಿ.

೨. ಕೆಳಗೆ ಕೊಟ್ಟಿರುವ ಮಾಲೆಗಿಂತ ಉದ್ದವಾದ ಮಾಲೆಯನ್ನು ಚಿತ್ರಿಸಿ.



೩. ಶೆಲ್ಲಿ ಮತ್ತು ಆದಿ ಹಿಡಿದಿರುವ ಅಲಂಕಾರ ಮಾಲೆಗಿಂತ ಚಿಕ್ಕದಾದ ಮಾಲೆಯನ್ನು ಚಿತ್ರಿಸಿ.



© NCERT not to be republished

೪. ಕೆಳಗೆ ಚಿತ್ರದಲ್ಲಿ ತೋರಿಸಿರುವ ಮುಖದ ಮೇಲಿನ ಮೀಸೆಯ ಅರ್ಧದಷ್ಟು, ಉದ್ದವಿರುವ ಮೀಸೆಯ ಉಳಿದ ಇನ್ನೊಂದು ಅರ್ಧವನ್ನು ಚಿತ್ರಿಸಿ.



೫. ಮಾಲೆಗಳನ್ನು ನೋಡಿ ಮತ್ತು ಆದಿಗೆ ಉದ್ದವಾದದನ್ನು ಆಯ್ಕೆ ಮಾಡಲು ಸಹಾಯ ಮಾಡಿ. ನೀವು ಉದ್ದವಾದದನ್ನು ಹೇಗೆ ಕಂಡುಕೊಂಡಿರಿ? ಚರ್ಚಿಸಿ.



© NCERT not to be republished

ಶೆಲ್ಲಿ ಮತ್ತು ಆದಿ ಪಾರ್ಟಿಗಾಗಿ ತರಗತಿಯೊಳಗೆ ದೊಡ್ಡ ಮೇಜು ತೆಗೆದುಕೊಂಡು ಹೋಗಬೇಕಾಗಿದೆ. ಮೇಜು ಎತ್ತಿಕೊಂಡು ಚಲಿಸಲು ಇಬ್ಬರಿಗೂ ತುಂಬಾ ಭಾರವಾಗಿದೆ. ಮೇಜನ್ನು ಎತ್ತದೆ, ಮೇಜು ತರಗತಿಯ ಬಾಗಿಲಿನ ಮೂಲಕ ಹೋಗಬಹುದೇ ಎಂದು ಅವರು ಹೇಗೆ ಕಂಡುಹಿಡಿಯಬಹುದು? ಅವರು ಏನು ಮಾಡಬೇಕೆಂದು ಕಂಡುಹಿಡಿಯಲು ಅವರಿಗೆ ಸಹಾಯ ಮಾಡಿ.




ಮೇಜಿನ ಉದ್ದ ಮತ್ತು ಅಗಲ ಎರಡೂ ಬಾಗಿಲಿನ ಅಗಲಕ್ಕಿಂತ ಹೆಚ್ಚಿದ್ದರೂ ಅದನ್ನು ಬಾಗಿಲಿನ ಒಳಗೆ ತೆಗೆದುಕೊಂಡು ಹೋಗಲು ಮಾರ್ಗವಿದೆಯೇ?

## ನಾವು ಆಡೋಣ

ನಿಮ್ಮ ತರಗತಿಯಲ್ಲಿ ಲಭ್ಯವಿರುವ ಬಾಕ್ಸ್‌ಗಳು ಅಥವಾ ಬ್ಯಾಗಗಳು ಅಥವಾ ಇತರ ಯಾವುದೇ ವಸ್ತುಗಳನ್ನು ಬಳಸಿಕೊಂಡು ಸೇತುವೆಯನ್ನು ಮಾಡಿ. ಸೇತುವೆ ಚಲಿಸದಂತೆ ಪೆಟ್ಟಿಗೆಗಳನ್ನು ಇರಿಸಿ ಅಥವಾ ಜೋಡಿಸಿ. ನಿಮ್ಮ ತರಗತಿಯಿಂದ ಕೆಲವು ವಸ್ತುಗಳನ್ನು ತೆಗೆದುಕೊಳ್ಳಿ ಮತ್ತು ವಸ್ತುಗಳು ಸೇತುವೆಯ ಮೂಲಕ ತೆಗೆದುಕೊಂಡು ಹೋಗಬಹುದೇ ಎಂದು ಊಹಿಸಿ.



ನಿಮ್ಮ ಶಾಲಾ ಗೇಟ್ ಮೂಲಕ ತೆಗೆದುಕೊಂಡು ಹೋಗಲು ಸಾಧ್ಯವಾಗದ ಕೆಲವು ವಸ್ತುಗಳನ್ನು ನೀವು ಹೆಸರಿಸಬಹುದೇ? ಚರ್ಚಿಸಿ.



**ಶಿಕ್ಷಕರಿಗೆ ಟಿಪ್ಪಣಿ:** ಮೇಜು ಮತ್ತು ಬಾಗಿಲಿನ ಮೇಲಿನ ಉದಾಹರಣೆಯಲ್ಲಿರುವಂತೆ ಎರಡು ಉದ್ದಗಳನ್ನು ಪರಸ್ಪರ ಪಕ್ಕಕ್ಕೆ ತರುವ ಮೂಲಕ ಹೋಲಿಸುವುದು ಯಾವಾಗಲೂ ಸಾಧ್ಯವಿಲ್ಲ. ಸಾಮಾನ್ಯ ಘಟಕವನ್ನು ಬಳಸಿಕೊಂಡು ಪರೋಕ್ಷವಾಗಿ ಅಳೆಯಬಹುದು ಎಂದು ಕಂಡುಹಿಡಿಯಲು ಈ ಅಭ್ಯಾಸವು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ.

# ಇವು ಎಲ್ಲರಿಗೂ ಅನ್ವಯಿಸುತ್ತದೆಯೇ?

ಮಕ್ಕಳು ನಾಟಕಕ್ಕಾಗಿ ವೇಷಭೂಷಣಗಳನ್ನು ತಯಾರಿಸಲು ತಮ್ಮ ದೇಹದ ಭಾಗಗಳನ್ನು ಅಳೆಯುತ್ತಿದ್ದಾರೆ.



ಅವರು ಈ ಕೆಳಗಿನ ಹೇಳಿಕೆಗಳನ್ನು ನೀಡಿದ್ದಾರೆ. ಅವು ಎಲ್ಲಾ ಮಕ್ಕಳಿಗೆ ಅನ್ವಯಿಸುತ್ತದೆಯೇ ಎಂದು ನೀವು ಭಾವಿಸುತ್ತೀರಾ? ನಾವು ಪರಿಶೀಲಿಸೋಣ. ಅಳೆಯಲು ನಿಮ್ಮ ಸ್ನೇಹಿತರ ಸಹಾಯವನ್ನು ತೆಗೆದುಕೊಳ್ಳಿ. ಸರಿಯಾದ ಉತ್ತರಕ್ಕೆ ü ಗುರುತು ಮಾಡಿ.

೧. ನಿಮ್ಮ ತಲೆ ೩ ಕೈ ಅಂಗುಲ ದುಂಡಾಗಿದೆ. ಸರಿ/ತಪ್ಪು

೨. ನಿಮ್ಮ ಮುಂಗೈಯನ ಉದ್ದವು ನಿಮ್ಮ ಪಾದಗಳ ಉದ್ದಕ್ಕೆ ಸಮನಾಗಿರುತ್ತದೆ. ಸರಿ/ತಪ್ಪು

೩. ನಿಮ್ಮ ಎತ್ತರವು ಅಗಲವಾಗಿ ತೆರೆದಿರುವ ನಿಮ್ಮ ಕೈ ತೋಳುಗಳ ಉದ್ದಕ್ಕೆ ಸಮನಾಗಿರುತ್ತದೆ. ಸರಿ/ತಪ್ಪು

ಶೆಲ್ಲಿ ನಾಟಕಕ್ಕೆ ಪರದೆಗಳನ್ನು ಮಾಡಲು ಬಯಸುತ್ತಾನೆ. ಲೀನಾ ತನ್ನ ತಾಯಿಯ ಸೀರೆಯನ್ನು ತಂದಿದ್ದಾಳೆ. ಆದಿ ತನ್ನ ಪೆನ್ಸಿಲ್‌ನಿಂದ ಗೋಡೆಯ ಉದ್ದವನ್ನು ಅಳೆದನು.




© NCERT not to be republished







**ಮೀಟರ್‌ನಷ್ಟು ಉದ್ದದ ಹಗ್ಗವನ್ನು ತಯಾರಿಸುವ ಕ್ರಮಗಳು:**

೧. ಒಂದು ಮೀಟರ್ ರಾಡ್ ಅಥವಾ ಒಂದು ಇಂಚಿನ ಟೇಪ್ ಮತ್ತು ಹಗ್ಗ ಅಥವಾ ದಾರವನ್ನು ತೆಗೆದುಕೊಳ್ಳಿ.

೨. ಅದರ ಒಂದು ತುದಿಯಲ್ಲಿ ಒಂದು ಗಂಟು ಮಾಡಿ.

೩. ಮೀಟರ್ ರಾಡ್‌ಅನ್ನು ಹಗ್ಗದ ಉದ್ದಕ್ಕೂ ಇರಿಸಿ.



೪. ಹಗ್ಗದ ಮೇಲೆ ಒಂದು ಮೀಟರ್‌ಗೆ ಗುರುತು ಮಾಡಿ ಮತ್ತು ಅಲ್ಲಿ ಒಂದು ಗಂಟು ಹಾಕಿ.

೫. ಈಗ ಎರಡು ಗಂಟುಗಳ ನಡುವಿನ ಉದ್ದವು ಒಂದು ಮೀಟರ್ ಆಗಿದೆ. ಹಗ್ಗವು ಒಂದು ಮೀಟರ್ ಅಳತೆ ಹೊಂದಿದೆಯೇ ಎಂದು ಮತ್ತೊಮ್ಮೆ ಪರಿಶೀಲಿಸಿ.

© NCERT not to be republished

ನಿಮ್ಮ ತರಗತಿಯ ಗೋಡೆಯ ಮೇಲೆ ಒಂದು ಮೀಟರ್‌ಗೆ ಗುರುತು ಹಾಕುವ ಮೂಲಕ ನಿಮ್ಮ ಎತ್ತರವನ್ನು ಅಳೆಯಿರಿ.

ಒಂದು ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಮತ್ತು ಒಂದು ಮೀಟರ್‌ಗಿಂತ ಕಡಿಮೆ ಎತ್ತರವಿರುವ ನಿಮ್ಮ ಸ್ನೇಹಿತರ ಹೆಸರುಗಳನ್ನು ಬರೆಯಿರಿ.

| ಒಂದು ಮೀಟರ್‌ಗಿಂತ ಹೆಚ್ಚು ಎತ್ತರ | ಒಂದು ಮೀಟರ್‌ಗಿಂತ ಕಡಿಮೆ ಎತ್ತರ |
|---|---|
| | |
| | |
| | |
| | |
| | |



ಈ ಮಕ್ಕಳಲ್ಲಿ ಅತ್ಯಂತ ಹೆಚ್ಚು ಎತ್ತರವಾಗಿದ್ದವರಿಗೆ ವೃತ್ತಾಕಾರ ಹಾಕಿ:



ಅವರಲ್ಲಿ ಯಾರು ಹೆಚ್ಚು ಎತ್ತರವಾಗಿದ್ದಾರೆ? ಚರ್ಚಿಸಿ.

© NCERT not to be republished

ನಿಮ್ಮ ಸುತ್ತಮುತ್ತಲು ಒಂದು ಮೀಟರ್ ಉದ್ದ, ಒಂದು ಮೀಟರ್‌ಗಿಂತ ಹೆಚ್ಚು ಮತ್ತು ಒಂದು ಮೀಟರ್‌ಗಿಂತ ಕಡಿಮೆ ಇರುವ ವಸ್ತುಗಳ ಹೆಸರುಗಳನ್ನು ಬರೆಯಿರಿ.

| ಒಂದು ಮೀಟರ್‌ಗಿಂತ ಹೆಚ್ಚು ಉದ್ದದ ವಸ್ತುಗಳು | ಒಂದು ಮೀಟರ್‌ಗಿಂತ ಕಡಿಮೆ ಉದ್ದದ ವಸ್ತುಗಳು | ಒಂದು ಮೀಟರ್‌ಗೆ ಸಮನವಾದ ಉದ್ದದ ವಸ್ತುಗಳು |
|---|---|---|
| | | |
| | | |
| | | |
| | | |
| | | |
| | | |





ಇದು ಒಂದು ಮೀಟರ್ ಉದ್ದವಾಗಿದೆ.



ಅದನ್ನು ಅರ್ಧಕ್ಕೆ ಮಡಚಿ. ಅದು ಅರ್ಧ ಮೀಟರ್ ಉದ್ದವಾಗುತ್ತದೆ.



ಅದನ್ನು ಮತ್ತೆ ಅರ್ಧಕ್ಕೆ ಮಡಚಿ. ಇದು ಕಾಲು ಮೀಟರ್ ಉದ್ದವಾಗುತ್ತದೆ.




© NCERT not to be republished



## ನಾವು ಮಾಡೋಣ

೧. ಒಂದು ಮೀಟರ್, ಅರ್ಧ ಮೀಟರ್ ಮತ್ತು ಕಾಲು ಮೀಟರ್ ಹಗ್ಗಗಳನ್ನು ಬಳಸಿಕೊಂಡು ವಿವಿಧ ವಸ್ತುಗಳ ಉದ್ದವನ್ನು ಕಂಡುಹಿಡಿಯಿರಿ. ಸೂಕ್ತ ಬಾಕ್ಸ್‌ಗಳಲ್ಲಿ ಅವುಗಳ ಹೆಸರುಗಳನ್ನು ಬರೆಯಿರಿ ಮತ್ತು ü ನಿಂದ ಗುರುತು ಮಾಡಿ.

| ವಸ್ತುಗಳು | ಕಾಲು ಮೀಟರ್ ಗಿಂತ ಕಡಿಮೆ | ಕಾಲು ಮೀಟರ್ ಗಿಂತ ಹೆಚ್ಚು | ಅರ್ಧ ಮೀಟರ್ ಗಿಂತ ಕಡಿಮೆ | ಅರ್ಧ ಮೀಟರ್ ಗಿಂತ ಹೆಚ್ಚು | ಒಂದು ಮೀಟರ್ ಗಿಂತ ಕಡಿಮೆ | ಒಂದು ಮೀಟರ್ ಗಿಂತ ಹೆಚ್ಚು |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

೨. ನೆಲದ ಮೇಲೆ ಒಂದು ರೇಖೆಯನ್ನು ಪ್ರಾರಂಭಿಕ ರೇಖೆ ಎಂದು ಗುರುತು ಮಾಡಿ ಮತ್ತು ತದನಂತರ ಪ್ರಾರಂಭಿಕ ರೇಖೆಯಿಂದ ಒಂದು ಮೀಟರ್ ದೂರದಲ್ಲಿ ಮತ್ತೊಂದು ರೇಖೆಯನ್ನು ಗುರುತು ಮಾಡಿ. ಪ್ರಾರಂಭಿಕ ರೇಖೆ ಮೇಲೆ ನಿಂತು ಜಿಗಿಯಿರಿ. ಕಾಲು ಮೀಟರ್, ಅರ್ಧ ಮೀಟರ್ ಮತ್ತು ಒಂದು ಮೀಟರ್‌ಗಿಂತ ಹೆಚ್ಚು ಜಿಗಿಯುವ ಮಕ್ಕಳ ಹೆಸರುಗಳನ್ನು ಬರೆಯಿರಿ.

೩. ಒಂದು ಚೆಂಡು ಅಥವಾ ಡಿಸ್ಕನ್ನು ತೆಗೆದುಕೊಂಡು ಅದನ್ನು ನಿಮಗೆ ಸಾಧ್ಯವಾದಷ್ಟು ದೂರ ಎಸೆಯಲು ಪ್ರಯತ್ನಿಸಿ. ಈಗ ಎಸೆತ ಎಷ್ಟು ದೂರದಲ್ಲಿದೆ ಎಂದು ಅಳೆಯಿರಿ.

© NCERT not to be republished

## ನಾವು ಮಾಡೋಣ

೧. ಮೀಟರ್ ಉದ್ದದ ಹಗ್ಗ ಅಥವಾ ಪಟ್ಟಿಯನ್ನು ಬಳಸಿ ನಿಮ್ಮ ಶಿಕ್ಷಕರು ಅಥವಾ ಪೋಷಕರ ಎತ್ತರವನ್ನು ಅಳೆಯಿರಿ.

೨. ಉಣ್ಣೆ ಅಥವಾ ದಾರವನ್ನು ಒಂದು ಮೀಟರ್‌ನಷ್ಟು ಉದ್ದ ಅಂದಾಜು ಮಾಡಿ ಮತ್ತು ಕತ್ತರಿಸಿ. ನಿಮ್ಮ ಸ್ನೇಹಿತರಿಗೂ ಅದೇ ರೀತಿ ಮಾಡಲು ಹೇಳಿ. ಈಗ ಯಾರ ಅಂದಾಜು ಹತ್ತಿರದಲ್ಲಿದೆ ಎಂದು ಮೀಟರ್ ಹಗ್ಗದ ಸಹಾಯದಿಂದ ಪರಿಶೀಲಿಸಿ.

೩. ಒಂದು ಮೀಟರ್ ಉದ್ದದ ಹಗ್ಗವನ್ನು ೪ ಸಮಾನ ತುಂಡುಗಳಾಗಿ ಕತ್ತರಿಸಿ. ನೀವು ಎಷ್ಟು ಕಡಿತಗಳನ್ನು ಮಾಡಿದ್ದೀರಿ?

೪. ಒಂದು ಮೀಟರ್ ಹಗ್ಗಕ್ಕೆ ಎಷ್ಟು ಹೆಜ್ಜೆಗಳು ಹೊಂದಿಕೊಳ್ಳುತ್ತವೆ?

೫. ತರಗತಿ ಗೋಡೆಯ ಒಂದು ಬದಿಯು ಎಷ್ಟು ಉದ್ದವಾಗಿದೆ ಎಂಬುದನ್ನು ಕಂಡುಹಿಡಿಯಲು ಮೀಟರ್ ಹಗ್ಗವನ್ನು ಬಳಸಿ.

© NCERT not to be republished